UASB LIBRARY
Newspaper Clippings
Pg .1 Tuesday 14-12-2021 Jai Kisan



It's dance of war, not love, for state's own Kottigehara frog

BOSKY KHANNA @ Bengaluru

BIRDS are commonly known to perform fantastic dance routines to attract mates, but here is a frog species from Karnataka that gyrates to stamp its authority over its boundaries.

For the first time, a study was conducted comparing the Kottigehara dancing frog with the Bornean rock frog (foot flagging frog). Both species have similar dance moves and are found in similar regions. But the study proved that they dance for completely different reasons, setting off leading batrachologists (those who study amphibians, including frogs) from Bengaluru and other countries to take up more detailed research.

The study -- 'A Common Endocrine Signature Marks the Convergent Evolution of an Elaborate Dance Display in Frogs', which was released in November 2021 -- assessed the behaviour of frogs and reasons for their dancing.

KV Gururaj, a co-author of the study and Adjunct Scientist at the Research and Development Centre and Science Media Centre, Indian Institute of Science Campus, Gubbi Labs, told The New Indian Express, "The Bornean rock frog, which resides behind streams, makes a loud beep call and raises its leg and dances to draw the attention of its mate. But the Kottigehara dancing frog, found in the Western Ghats, again along the river, dances to mark its territory and show its superiority."


Micrixalus kottigeharensis | W. HODLEY

The two species were chosen as they not only have a similar behaviour but also the dancing style, which includes lifting of hind legs.

Since the reasons for their dancing were found to be different, researchers are out to study other species and understand why frogs in South America and Australia too dance. Scientifically, frogs do not dance, but only make a gestural display.

Researchers said that they studied how common traits arise in unrelated species that often evolve similar phenotypic solutions to the same environmental problem.

14-12-2021
Ind Exp
Pg 01

ಕಬ್ಬನ್‌ಪಾರ್ಕ್‌ನಲ್ಲಿ 15 ಸಾವಿರ ಅಲಂಕಾರಿಕ ಹೂ ಕುಂಡ ಸಿದ್ಧ

■ **ವಿಕ ಸುದ್ದಿಲೋಕ** ಬೆಂಗಳೂರು

ಜನವರಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನಕ್ಕಾಗಿ ಕಬ್ಬನ್‌ಪಾರ್ಕ್‌ನಲ್ಲಿ 15 ಸಾವಿರ ಅಲಂಕಾರಿಕ ಹೂವಿನ ಪಾಟ್‌ಗಳು ಸಜ್ಜಾಗುತ್ತಿವೆ.

ಪ್ರತಿ ಫಲಪುಷ್ಪ ಪ್ರದರ್ಶನದಲ್ಲಿ ಹೂ ಕುಂಡಗಳ ಆಕರ್ಷಣೆ ವಿಶೇಷವಾಗಿರುತ್ತದೆ. ಹೀಗಾಗಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯ ನಂದಿಬೆಟ್ಟ, ಊಟಿ, ಕೆಮ್ಮಣ್ಣುಗುಂಡಿ ಮತ್ತಿತರ ಭಾಗಗಳಿಂದ ಆ ಭಾಗದ ವಿಶೇಷ ಹೂವುಗಳು, ಕುಂಡಗಳಲ್ಲಿ ಬೆಳೆಸಿದ ಹೂವುಗಳನ್ನು ತರಿಸಿ ಜೋಡಿಸಲಾಗುತ್ತದೆ. ಅದೇ ರೀತಿ ಕಬ್ಬನ್‌ಪಾರ್ಕ್‌ನಿಂದಲೂ ಅಲಂಕಾರಿಕ ಹೂವಿನ ಗಿಡಗಳನ್ನು ತರಿಸುವುದು ವಾಡಿಕೆ. ಹೀಗಾಗಿ ಪ್ರತಿ ಬಾರಿಯ ಪ್ರದರ್ಶನಕ್ಕೆ ನೀಡಿದಂತೆ ಈ ಬಾರಿಯೂ 15 ಸಾವಿರ ಕುಂಡಗಳಲ್ಲಿ ಬಗೆ ಬಗೆಯ ಹೂವುಗಳನ್ನು ಬೆಳೆಸಲಾಗಿದೆ. ಇದಕ್ಕಾಗಿ ಪುಟಾಣಿ ಪಾಟ್‌ಗಳನ್ನು ಒಪ್ಪವಾಗಿ ಜೋಡಿಸಿ ಅದಕ್ಕೆ ಬೇಕಾದ ಮಣ್ಣು, ನೀರು, ಹೂವಿನ ಬೀಜ, ಗೊಬ್ಬರ ಇತ್ಯಾದಿಗಳನ್ನು ಹಾಕಿ ಅಚ್ಚುಕಟ್ಟಾಗಿ ಬೆಳೆಸಲಾಗುತ್ತಿದೆ. ಉದ್ಯಾನದ ಸಿಬ್ಬಂದಿ ಗಿಡಗಳ ಆರೈಕೆಯಲ್ಲಿ ತೊಡಗಿದ್ದಾರೆ.



ಗಣರಾಜ್ಯೋತ್ಸವಕ್ಕಾಗಿ ಫಲಪುಷ್ಪ ಪ್ರದರ್ಶನ

"ಲಾಲ್‌ಬಾಗ್‌ನ ಫಲಪುಷ್ಪ ಪ್ರದರ್ಶನಕ್ಕೆ 10 ಸಾವಿರ ಹೂಕುಂಡಗಳನ್ನು ರವಾನಿಸುತ್ತೇವೆ. ಇದರ ಜತೆಗೆ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭಕ್ಕೆ 5 ಸಾವಿರ ಹೂಕುಂಡಗಳನ್ನು ಕಬ್ಬನ್ ಪಾರ್ಕ್ ವತಿಯಿಂದ ನೀಡಲಾಗುವುದು. ಹೀಗಾಗಿ ಗಣರಾಜ್ಯೋತ್ಸವಕ್ಕೆಂದು ಒಟ್ಟಾರೆ 15 ಸಾವಿರ ಹೂಕುಂಡಗಳಲ್ಲಿ ವಿಶೇಷವಾಗಿ ಹೂವುಗಳನ್ನು ಬೆಳೆಸಲಾಗಿದೆ,'' ಎಂದು ರಾಜ್ಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಪಾರ್ಕ್ ಉಸ್ತುವಾರಿ) ಎಚ್.ಟಿ. ಬಾಲಕೃಷ್ಣ ತಿಳಿಸಿದರು.

ಯಾವ್ಯಾವ ಹೂವುಗಳು: ಸಾಲ್ವಿಯಾ ರೆಡ್, ಸಾಲ್ವಿಯಾ ವೈಟ್, ಮರಿಗೋಲ್ಡ್, ಟೊರೇನಿಯಂ, ಝಿನಿಯ, ಪೆಟೂನಿಯ, ಕ್ರಿಸಾಂತಿಮಮ್, ಡಯಾಂತಸ್, ಬೈಗೋನಿಯ, ಧಾಲಿಯಾ ಮತ್ತಿತರ ಹೂವುಗಳನ್ನು ಬೆಳೆಸಲಾಗಿದೆ.

14-12-2021
Vk Pg 07

"Everything comes to you at the right time. Be patient"

ಪರಿಷತ್ತಿನಲ್ಲಿ ಕಬ್ಬು ಬೆಳೆ ಬಾಕಿ ಬಿಲ್ ಪ್ರಸ್ತಾಪ | ಫಸಲ್ ಬಿಮಾ ಅಳವಡಿಕೆಗೆ ಆಗ್ರಹ

ಪ್ರತ್ಯೇಕ ಎಥೆನಾಲ್ ನೀತಿಗೆ ಒಕ್ಕೊರಲ ದನಿ

ಫಸಲ್ ಬಿಮಾ ಯೋಜನೆಗೆ ಕಬ್ಬು ಬೆಳೆ ಒಳಪಡಿಸುವ ಸಂಬಂಧ ಸೋಮವಾರ ಮಧ್ಯಾಹ್ನ ಪರಿಷತ್‌ನಲ್ಲಿ ಆರಂಭವಾದ ಚರ್ಚೆ ಗಂಭೀರ ಸ್ವರೂಪ ಪಡೆದುಕೊಂಡಿತು.

ಪರಿಷತ್ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ, ಕಬ್ಬು ಬೆಳೆ ಬಾಕಿ ಬಿಲ್ ಪಾವತಿ ಬಗ್ಗೆ ಗಮನ ಸೆಳೆದಾಗ ಉಳಿದ ಸದಸ್ಯರು, ಎಥೆನಾಲ್‌ಗಾಗಿ ರಾಜ್ಯಕ್ಕೆ ಪ್ರತ್ಯೇಕ ನೀತಿ ಜಾರಿಗೆ ಆಗ್ರಹಿಸಿದರು. ಕೇಂದ್ರವು ಶೇ.6 ರಷ್ಟು ಬಡ್ಡಿ ಸಹಾಯಧನ ನೀಡುತ್ತದೆ. ಗ್ರೇನ್ (ಕಾಳು) ಎಥೆನಾಲ್‌ಗೆ ಕೇಂದ್ರವು ಉತ್ತೇಜನ ನೀಡುತ್ತಿದೆ. ಉತ್ತರ ಕರ್ನಾಟಕದ ಜಿಲ್ಲೆಗಳು ಹೆಚ್ಚು ಕಬ್ಬು ಉತ್ಪಾದನೆ ಮಾಡುತ್ತಿವೆ. ಎಥೆನಾಲ್ ಉತ್ಪಾದನೆಗೆ ಪ್ರೋತ್ಸಾಹಧನ ವಿತರಿಸುವಂತೆ ಲಕ್ಷ್ಮಣ ಸವದಿ, ಮಹಾಂತೇಶ ಕವಟಗಿಮಠ ಸಲಹೆ ನೀಡಿದರು.

ಸವದಿಗೆ ತಿವಿದ ಬಿ.ಕೆ. ಹರಿಪ್ರಸಾದ್

ಎಥೆನಾಲ್ ಉತ್ಪಾದನೆಗೆ ಪ್ರತ್ಯೇಕ ನೀತಿ ಜಾರಿಗೆ ಒತ್ತಾಯಿಸಿ ಲಕ್ಷ್ಮಣ ಸವದಿ ಮಾತು ಮುಗಿಸುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಬಿಕೆ ಹರಿಪ್ರಸಾದ್ ''ವೈಯಕ್ತಿಕ ಹಿತಾಸಕ್ತಿಗಳಿದ್ದರೆ ಕೇಂದ್ರದ ಸಂಸತ್‌ಗಳಲ್ಲಿ ಚರ್ಚೆಗಳನ್ನು ಕೈಬಿಡಲಾಗುತ್ತದೆ. ವಿಧಾನ ಮಂಡಲ ಸಭೆಗಳಲ್ಲೂ ನಡೆಯಲಿ,'' ಎಂದು ಪರೋಕ್ಷವಾಗಿ ಸವದಿ ಸಕ್ಕರೆ ಕಾರ್ಖಾನೆ ಇರುವ ಹಿನ್ನೆಲೆಯಲ್ಲಿ 'ಸ್ವಹಿತಾಸಕ್ತಿ' ವಿಷಯ ಪ್ರಸ್ತಾಪಿಸಿದರು.

ಸರಕಾರದಿಂದಲೇ ವೇ ಬ್ರಿಡ್ಜ್?

ಪರಿಷತ್ ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್, ''ಸರಕಾರವೇ ಸಕ್ಕರೆ ಕಾರ್ಖಾನೆಗಳಲ್ಲಿ ವೇ ಬ್ರಿಡ್ಜ್ ಅಳವಡಿಸುವ ಕೆಲಸ ಮಾಡಬೇಕು. ಖಾಸಗಿ ವೇ ಬಿಡ್ಜ್‌ಗಳಿಂದ ಪ್ರತಿ ಲಾರಿಯಲ್ಲೂ 2 ರಿಂದ 3 ಟನ್‌ಗಳಷ್ಟೂ ರೈತರು ಮೋಸಕ್ಕೊಳಗಾಗುತ್ತಿದ್ದಾರೆ. ತಲಾ ವೇ ಬ್ರಿಡ್ಜ್‌ಗೆ 20 ಲಕ್ಷ ಖರ್ಚಾಗುತ್ತದೆ. ಸರಕಾರಕ್ಕೂ ಹೊರೆಯಲ್ಲ,'' ಎಂದರು.

ಫಸಲ್ ಭಿಮಾಗೆ ಒಳಪಡಿಸಿ

ಕಬ್ಬು ಬೆಳೆಯನ್ನು ಫಸಲ್ ಬಿಮಾ ಯೋಜನೆ ವ್ಯಾಪ್ತಿಗೆ ಅಳವಡಿಸಲು ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಸಕ್ಕರೆ ಸಚಿವರ ಪರವಾಗಿ ಉತ್ತರಿಸಿದ ಸಚಿವ ಗೋವಿಂದ ಕಾರಜೋಳ ''ಕಬ್ಬು ವಾಣಿಜ್ಯ ಬೆಳೆ ಆಗಿರುವುದರಿಂದ ರೈತರಿಗೆ ವಿಮಾ ಕಂತಿನ ಹೊರೆ ಅಧಿಕವಾಗುತ್ತದೆ. ರೈತರ ಹಿತದೃಷ್ಟಿಯಿಂದಲೇ ವಿಮೆಗೆ ಅಳವಡಿಸಲಿಲ್ಲ,'' ಎಂದರು.

ಆಗ ಮಧ್ಯ ಪ್ರವೇಶಿಸಿದ ಮಹಾಂತೇಶ್ ಕವಟಗಿಮಠ, ''ರೈತರು ಪಾವತಿಸುವ ವಿಮೆ ಕಂತಿನಲ್ಲಿ ಕೇಂದ್ರ ಸರಕಾರವು ಒಂದು ಪಾಲನ್ನು ನೀಡಲಿ,'' ಎಂದು ಆಗ್ರಹಿಸಿದರು.

ಶಿವಸಾಗರ ಶುಗರ್ಸ್‌ಗೆ 3 ಕೋಟಿ

ಸ್ಥಗಿತಗೊಂಡಿದ್ದ ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಉದುಪುಡಿಯ ಶಿವಸಾಗರ ಶುಗರ್ಸ್ ಲಿ. ಗೆ 3 ಕೋಟಿ ರೂ. ನೀಡಿ ಪ್ರಸಕ್ತ ಸಾಲಿನಲ್ಲಿ ಪುನಾರಂಭ ಮಾಡಲಾಗಿದೆ ಎಂದು ಪರಿಷತ್‌ಗೆ ಸಕ್ಕರೆ ಸಚಿವರು ಮಾಹಿತಿ ನೀಡಿದರು.

ನಮ್ ಕಬ್ಬು ನಿಮ್ ಫ್ಯಾಕ್ಟರಿಗೆ

ಕಬ್ಬು ಬೆಳೆ ಬಿಲ್ ಬಾಕಿ ಚರ್ಚೆ ವೇಳೆ 'ನಮ್ ಕಬ್ಬು ನಿಮ್ ಫ್ಯಾಕ್ಟರಿಗೆ ಹೊಂಟ್ಕೈತಿ. ಬಿಲ್ ನೋಡ್ರಿ' ಎಂದು ಸಭಾಪತಿ ಹೊರಟ್ಟಿ ಅವರು ಎಸ್.ಆರ್. ಪಾಟೀಲ್ ಅವರನ್ನು ಮೂದಲಿಸಿದರು. '14 ದಿನದೊಳಗೆ ಬಿಲ್ ಆಕೈತಿ. ತೊಂದರೆ ಇಲ್ಲ,'' ಎಂದು ಎಸ್. ಆರ್. ಪಾಟೀಲ್ ಪ್ರತಿಕ್ರಿಯಿಸಿದರು.



ಡಿ.19ರಿಂದ ಕಪ್ಪೆಗಳ ಹಬ್ಬ

ಬೆಂಗಳೂರು: ಕಪ್ಪೆಗಳಿಗೆ ಮದುವೆ ಮಾಡಿದರೆ ಮಳೆ ಬರುತ್ತದಂತೆ ಎಂದು ಗ್ರಾಮೀಣರು ಕೆರೆ, ಹಳ್ಳಗಳಲ್ಲಿ ಸಿಗುವ ಕಪ್ಪೆಗಳನ್ನು ಹಿಡಿದು ಮದುವೆ ಮಾಡುವುದನ್ನು ಕಂಡಿದ್ದೇವೆ. ಆದರೆ, ಈ ಬಾರಿ ಅರಣ್ಯ ಇಲಾಖೆಯೇ ಕಪ್ಪೆಗಳ ಹಬ್ಬ ಆಚರಿಸಲು ಮುಂದಾಗಿದೆ. ಆದರೆ ಮಳೆಗಾಗಿ ಅಲ್ಲ!

ಇದೇ ಪ್ರಥಮವಾಗಿ ಕಪ್ಪೆ ಹಬ್ಬವನ್ನು ಡಿಸೆಂಬರ್ 18 ಮತ್ತು 19ರಂದು ಶಿವಮೊಗ್ಗ ಜಿಲ್ಲೆಯ ಕಾರ್ಗಲ್‌ನ ಮುಪ್ಪಾನೆ ಪ್ರಕೃತಿ ಶಿಬಿರದಲ್ಲಿ ಆಯೋಜನೆ ಮಾಡಲಾಗುತ್ತಿದೆ. ಸಮಾಜದಲ್ಲಿ ಇಂಡಿಕೇಟರ್‌ಗಳಾಗಿ ಕೆಲಸ ಮಾಡುವ ಕಪ್ಪೆಗಳ ಮಹತ್ವ, ಅವುಗಳ ಬದುಕಿನ ಶೈಲಿ ಕುರಿತು ಸಮಾಜಕ್ಕೆ ಅರಿವು ಮೂಡಿಸುವ ಉದ್ದೇಶದಿಂದ ಕರ್ನಾಟಕ ಅರಣ್ಯ ಇಲಾಖೆ ಈ ಕಾರ್ಯಕ್ರಮವನ್ನು ಆಯೋಜಿಸಿದೆ.



ಕಪ್ಪೆಗಳ ಬಗ್ಗೆ ಅಧ್ಯಯನ ಮಾಡುವರು, ಜ್ಞಾನ ಗಳಿಸಲು ಆಸಕ್ತಿ ಉಳ್ಳವರು ಈ ಕಪ್ಪೆ ಹಬ್ಬದಲ್ಲಿ ಪಾಲ್ಗೊಳ್ಳಬಹುದು. ಈಗಾಗಲೇ ಪ್ರಾಣಿಗಳ ಬಗ್ಗೆ ಅಧ್ಯಯನ ಮಾಡುತ್ತಿರುವ ಕುವೆಂಪು ವಿವಿಯ ವಿದ್ಯಾರ್ಥಿಗಳು ಸೇರಿ ನೂರು ವಿದ್ಯಾರ್ಥಿಗಳು ಈ ಕಪ್ಪೆ ಹಬ್ಬದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಾರ್ವಜನಿಕರು ಕೂಡ 50 ಮಂದಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಪ್ಪಾನೆ ಪ್ರಕೃತಿ ಶಿಬಿರದಲ್ಲಿ ಎರಡು ದಿನ ನಡೆಯಲಿರುವ ಈ ಕಪ್ಪೆ ಹಬ್ಬದಲ್ಲಿ ಪಾಲ್ಗೊಳ್ಳುವರಿಗೆ ಉಚಿತ ಊಟದ ವ್ಯವಸ್ಥೆ ಮಾಡಲಾಗಿದೆ. ಸ್ವಂತ ಪ್ರಯಾಣ ವೆಚ್ಚ ಮಾತ್ರ ಭರಿಸಿಕೊಳ್ಳಬೇಕು. ವಸತಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಆಸಕ್ತರು ಈ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಮೊದಲೇ ನೋಂದಾಯಿಸಿಕೊಳ್ಳಬೇಕು ಎಂದು ಕಪ್ಪೆ ಹಬ್ಬ ಆಯೋಜಕರು ತಿಳಿಸಿದ್ದಾರೆ. ಸಂಪರ್ಕ ಸಂಖ್ಯೆ: ವಲಯ ಅರಣ್ಯ ಅಧಿಕಾರಿಗಳು ಕಾರ್ಗಲ್, ಮುಪ್ಪಾನೆ ಪ್ರಕೃತಿ ಶಿಬಿರ, 8277383139 – 9448407544. ಇಲ್ಲಿಗೆ ಸಂಪರ್ಕಿಸಬಹುದು.

---

70 ಸಾವಿರ ರೈತ ಮಕ್ಕಳಿಗೆ ವಿದ್ಯಾನಿಧಿ

ಬೆಂಗಳೂರು: ರಾಜ್ಯ ಸರ್ಕಾರ ಘೋಷಣೆ ಮಾಡಿರುವ ರೈತರ ಮಕ್ಕಳ ವಿದ್ಯಾನಿಧಿ ಯೋಜನೆಯಡಿ 70 ಸಾವಿರ ಮಕ್ಕಳ ಖಾತೆಗೆ ಹಣ ಜಮೆ ಆಗಲಿದೆ.

ರಾಜ್ಯ ಸರ್ಕಾರ ರೈತರ ಮಕ್ಕಳಿಗೆ ಮತ್ತೊಂದು ಸಿಹಿಸುದ್ದಿ ನೀಡಿದ್ದು, ರೈತ ವಿದ್ಯಾನಿಧಿ ಯೋಜನೆಯನ್ನು ಮಾರ್ಪಾಡಿಸುವ ಮೂಲಕ ರಾಜ್ಯ ಸರ್ಕಾರ ಯೋಜನೆಯನ್ನು ಮತ್ತಷ್ಟು ಸರಳ ಮತ್ತು ವಿಸ್ತೃತಗೊಳಿಸಿ ಆದೇಶ ಹೊರಡಿಸಿದೆ. ವಿದ್ಯಾನಿಧಿ ಯೋಜನೆಯನ್ನು ರೈತರ ಮಕ್ಕಳಿಗಷ್ಟೇ ಮಿತಿಗೊಳಿಸಿತ್ತು. ಈ ಆದೇಶವನ್ನು ಮಾರ್ಪಡಿಸಿ ಇದೀಗ ರೈತ ಕುಟುಂಬದ ಎಲ್ಲ ಮಕ್ಕಳಿಗೂ ವಿದ್ಯಾನಿಧಿ ನೀಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ಶನಿವಾರ ಒಂದೇ ದಿನ 70 ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ಯೋಜನೆ ದೊರೆತಿದೆ. ಇದರಿಂದ ಅವರು ಅರ್ಜಿ ಸಲ್ಲಿಸದೇ ಇದ್ದರೂ ಅವರ ಬ್ಯಾಂಕ್ ಖಾತೆಗೆ ಹಣ ಜಮೆ ಆಗಲಿದೆ ಎಂದು ಸರ್ಕಾರ ತಿಳಿಸಿದೆ.

ರೈತರ ಮಕ್ಕಳು ಯೋಜನೆಗೆ ಅರ್ಜಿ ಸಲ್ಲಿಸದೇ ಇದ್ದರೂ ಅರ್ಹರನ್ನು ಗುರುತಿಸಿಯೇ ಹಣವನ್ನು ಖಾತೆಗೆ ಜಮೆ ಮಾಡಲಾಗುತ್ತಿದೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

14-12-2021 Vk Pg 02

14-12-2021 Sk Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in